ಕರ್ನಾಟಕ ಸರ್ಕಾರ
Department of Collegiate Education
Government of Karnataka

O. 1, Unnatha Shikshana Soudha, Sheshadri Road, Bangalore - 560 001 Phone: 080 22343904, email: bngcce@kar.nic.in

ಸಂಖ್ಯೆ : ಕಾಶಿಇ/ಶೈವಿ/22/ಸುತ್ತೋಲೆ/2023-24 ದಿನಾಂಕ : 13.07.2023.

# ಸುತ್ತೋಲೆ

**ವಿಷಯ:** ರಾಷ್ಟ್ರೀಯ ಮಟ್ಟದ ಗ್ರಂಥಾಲಯಗಳ ಉತ್ಸವದಲ್ಲಿ ಗ್ರಂಥಾಲಯಗಳ ಆಧುನೀಕರಣ ಮತ್ತು ಡಿಜಿಟಲೀಕರಣ ಕುರಿತ ಸಂವಾದಲ್ಲಿ ಭಾಗವಹಿಸಲು ಹಾಗೂ ಗ್ರಂಥಾಲಯಗಳನ್ನು ಶ್ರೇಣೀಕರಸಲು, ಗ್ರಂಥಾಲಯಗಳ ಗುಣಮಟ್ಟಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ:** ಮಾನ್ಯ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವರು, ಭಾರತ ಸರ್ಕಾರ ಇವರ ಡಿ.ಓ.ಸಂಖ್ಯೆ:18-2/2023-Lib, ದಿನಾಂಕ: 23-06-2023.

******

ಸೂಚಿತ ವಿಷಯಕ್ಕೆ ಸಂಬಂದಿಸಿದಂತೆ, 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಎರಡನೇ ಹಂತದ ಭಾಗವಾಗಿ, ಭಾರತ ಸರ್ಕಾರ, ಸಂಸ್ಕೃತಿ ಸಚಿವಾಲಯ ವಿಭಾಗವು ದಿನಾಂಕ: **05 ಮತ್ತು 06, ಆಗಸ್ಟ್, 2023** ರಂದು ಎರಡು ದಿನಗಳ "ಗ್ರಂಥಾಲಯಗಳ ಉತ್ಸವವನ್ನು" ನವ ದೆಹಲಿಯಲ್ಲಿ ಆಯೋಜಿಸುತ್ತಿದೆ, ಗೌರವಾನ್ವಿತ ಪ್ರಧಾನಮಂತ್ರಿಯವರ ಕಲ್ಪನೆಯ ಭಾರತದಲ್ಲಿ "ಗ್ರಂಥಾಲಯಗಳು ಮತ್ತು ಓದುವ ಸಂಸ್ಕೃತಿಯನ್ನು ಪ್ರೋತ್ಸಾಹಿಸುವುದು" ಈ ಉತ್ಸವದ ಪ್ರಮುಖ ಉದ್ದೇಶ. ಹಾಗೂ ಪ್ರಪಂಚದಾದ್ಯಂತ ಪ್ರಾಚೀನ ಮತ್ತು ಸಾಂಪ್ರದಾಯಿಕ ಗ್ರಂಥಾಲಯಗಳನ್ನು ಗುರುತಿಸುವುದರ ಜೊತೆಗೆ ಭಾರತದಲ್ಲಿನ ಗ್ರಂಥಾಲಯಗಳನ್ನು ಆಧುನೀಕರಣ ಮತ್ತು ಡಿಜಿಟಲೀಕರಣ ಕುರಿತ ಸಂವಾದ ಹಾಗೂ ಗ್ರಾಮ ಮತ್ತು ಸಮುದಾಯ ಮಟ್ಟದಲ್ಲಿ ಮಾದರಿ ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸುವ ಕ್ರಿಯಾಯೋಜನೆಯನ್ನು ರೂಪಿಸುವುದು ಈ ಉತ್ಸವದ ಪ್ರಮುಖ ಉದ್ದೇಶವಾಗಿದೆ.

ಗ್ರಂಥಾಲಯಗಳನ್ನು ಶ್ರೇಣೀಕರಸಲು, ಗ್ರಂಥಾಲಯಗಳ ಗುಣಮಟ್ಟಕ್ಕೆ ಸಂಬಂಧಪಟ್ಟಂತೆ ನಿಗಧಿಮಾಡಿರುವ ಮಾನದಂಡಗಳಾದ 1). ಮೂಲಸೌಕರ್ಯಗಳು, 2). ಸಂಪನ್ಮೂಲಗಳು ಮತ್ತು ಸಂಗ್ರಹಣೆ, 3). ಸೇವೆಗಳು ಮತ್ತು ಕಾರ್ಯಕ್ರಮಗಳು, 4). ಅನುದಾನ ಮತ್ತು ಕಾರ್ಯಾಚರಣೆಯ ಸುಸ್ಥಿರತೆ, ಹಾಗೂ 5). ತಂತ್ರಜ್ಞಾನ ಮತ್ತು ನಾವೀನ್ಯತೆ, ಇವುಗಳ ಆಧಾರದ ಮೇಲೆ ಇಲಾಖೆಯ ಎಲ್ಲಾ ಗ್ರಂಥಾಲಯಗಳು ಮಾಹಿತಿಯನ್ನು https://bitly.ws/J8pL ಇದರಲ್ಲಿ ದಿನಾಂಕ: 18-07-2023 ರ ಒಳಗೆ ಸಲ್ಲಿಸುವುದು ಕಡ್ಡಾಯ. ಈ ಮಾನದಂಡಗಳ ಆಧಾರದ ಮೇಲೆ ಉನ್ನತ ಶ್ರೇಣಿ ಪಡೆದ ಗ್ರಂಥಾಲಯಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ಗೌರವಿಸುವುದು ಮತ್ತು ಪ್ರಶಂಸಿಸುವುದು ಈ ಉತ್ಸವದ ಮತ್ತೊಂದು ಪ್ರಮುಖ ಉದ್ದೇಶವಾಗಿದೆ.

ಈ ಉತ್ಸವದಲ್ಲಿ ಗ್ರಂಥಾಲಯಗಳ ಆಧುನೀಕರಣ ಮತ್ತು ಡಿಜಿಟಲೀಕರಣ ಕುರಿತ ಸಂವಾದಲ್ಲಿ ಭಾಗವಹಿಸಲು ಗ್ರಂಥಪಾಲಕರು, ಲೇಖಕರು ಮತ್ತು ಓದುಗರನ್ನು ಗೌರವಾನ್ವಿತ ಪ್ರತಿನಿಧಿಯಾಗಿ ಭಾಗವಹಿಸಲು ಇಲಾಖೆಗೆ ಉಲ್ಲೇಖಿತ ಪತ್ರದನ್ವಯ ಸೂಚಿಸಲಾಗಿದೆ. ಆದುದರಿಂದ ಆಸಕ್ತಿವುಳ್ಳ ಗ್ರಂಥಪಾಲಕರು ತಮ್ಮ ಮಾಹಿತಿಯನ್ನು ಪ್ರಾಂಶುಪಾಲರಿಂದ ದೃಡೀಕರಿಸಿ ಇ-ಮೇಲ್ (library.dce123@gmail.com) ಮುಖಾಂತರ ದಿನಾಂಕ: 18-07-2023 ರ ಒಳಗೆ ಸಲ್ಲಿಸುವುದು. ಸದರಿ ಉತ್ಸವದಲ್ಲಿ ಭಾಗವಹಿಸುವ ಗ್ರಂಥಪಾಲಕರು ತಮ್ಮ ವೈಯಕ್ತಿಕ ಖರ್ಚಿನಲ್ಲಿ ಪ್ರಯಾಣಿಸುವುದು ಹಾಗೂ ವಸತಿ ವ್ಯವಸ್ಥೆಯನ್ನು ಮಾಡಿಕೊಳ್ಳುವುದು. ಇಲಾಖೆ ವತಿಯಿಂದ ನಿಯಮಾನುಸಾರ ಪರಿಶೀಲಿಸಿ ಅನ್ಯಕಾರ್ಯನಿಮಿತ್ತ ರಜೆ ಎಂದು ಮಂಜೂರುಮಾಡಲಾಗುವುದು.

*(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)*

13/7/23
ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರು

ಇವರಿಗೆ:

1. ಸರ್ಕಾರದ ಅಪರಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು – 560001. (ಮಾಹಿತಿಗಾಗಿ)
2. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲ್ಬುರ್ಗಿ.
3. ಪ್ರಾಂಶುಪಾಲರು, ರಾಜ್ಯ ಎಲ್ಲಾ ಸರ್ಕಾರಿ ಕಾಲೇಜುಗಳಿಗೆ ಸೂಕ್ತ ಕ್ರಮಕ್ಕಾಗಿ.
4. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕಾ.ಶಿ.ಇ ಬೆಂಗಳೂರು.
5. ಕಛೇರಿ ಪ್ರತಿ.